ಜಿಲ್ಲಾ ಪರಿಷತ್‌ಗಳಿಗೆ ಚುನಾವಣೆ ನಡೆಸುವುದರ ಬಗ್ಗೆ

1914 - ಶ್ರೀ ಆರ್. ವಿ. ದೇಶಪಾಂಡೆ (ಹಳಿಯಾಳ) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಪ್ರಸ್ತುತ ಜಿಲ್ಲಾಪರಿಷತ್ತುಗಳ ಅವಧಿ ಎಂದಿಗೆ ಕೊನೆಗೊಳ್ಳುವುದು?*

ಆ) *ಈ ಅವಧಿ ಮುಗಿದ ನಂತರ ಸರ್ಕಾರವು ಜಿಲ್ಲಾಪರಿಷತ್ತುಗಳಿಗೆ ಚುನಾವಣೆ ನಡೆಸಲು ಕ್ರಮ ಕೈಗೊಳ್ಳುವುದೇ?*

ಶ್ರೀ ಕೆ. ಹೆಚ್.ಪಾಟೀಲ್ (ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಸಚಿವರು):

ಅ) ದಿನಾಂಕ : 12-1-1992ಕ್ಕೆ ಕೊನೆಗೊಳ್ಳುವುದು.

ಆ) ಕಾನೂನಿಗನುಗುಣವಾಗಿ ಕ್ರಮ ಕೈಗೊಳ್ಳಲಾಗುವುದು.

ಸ್ಥಳೀಯ ಸಂಸ್ಥೆಗಳ ಕಾನೂನು ಬದಲಾವಣೆ

2050-ಶ್ರೀ ಎಲ್. ಆರ್. ಶಿವರಾಮೇಗೌಡ (ನಾಗಮಂಗಲ) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಈಗಿರುವ ಪಂಚಾಯತ್ ರಾಜ್ ಜಿಲ್ಲಾ ಪರಿಷತ್ ಮಂಡಲ ಪಂಚಾಯಿತಿ ಕಾನೂನನ್ನು ಬದಲಾಯಿಸುವ ಯೋಜನೆ ಸರ್ಕಾರಕ್ಕಿದೆಯೆ?*

ಆ) *ಹಾಗಿದ್ದಲ್ಲಿ ಅದನ್ನು ಯಾವಾಗ ಬದಲಾಯಿಸಲಾಗುವುದು.*

ಇ) *1992ರ ಜನವರಿಯಲ್ಲಿ ಈಗಿರುವ ಜಿಲ್ಲಾ ಪರಿಷತ್ ಮಂಡಲ ಪಂಚಾಯಿತಿಗಳ ಅವಧಿ ಮುಗಿಯುವುದರಿಂದ ಚುನಾವಣೆಗಳನ್ನು ನಡೆಸಲಾಗುವುದೇ?*

ಈ) *ಇಲ್ಲದಿದ್ದಲ್ಲಿ ಸರ್ಕಾರದ ಯೋಚನೆ ಏನು?*

ಶ್ರೀ ಕೆ.ಹೆಚ್. ಪಾಟೀಲ್ (ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಸಚಿವರು):

ಅ) ವಿಷಯವು ಸರ್ಕಾರದ ತೀವ್ರ ಪರಿಶೀಲನೆಯಲ್ಲಿದೆ.

ಆ) ವಿಷಯ ಸರ್ಕಾರದ ತೀವ್ರ ಪರಿಶೀಲನೆಯಲ್ಲಿದೆ.

ಇ) ಕಾನೂನಿಗನುಗುಣವಾಗಿ ಕ್ರಮ ಕೈಗೊಳ್ಳಲಾಗುವುದು.

ಈ) ಉದ್ಭವಿಸುವುದಿಲ್ಲ.

ಕಾವೇರಿ ಜಲಾನಯನ ಪ್ರದೇಶದಲ್ಲಿ ಯೋಜನೆಗಳನ್ನು ಬೇಗ ಮುಗಿಸುವ ಬಗ್ಗೆ

2051 - ಶ್ರೀ ಎಲ್. ಆರ್. ಶಿವರಾಮೇಗೌಡ (ನಾಗಮಂಗಲ): ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಕಾವೇರಿ ಜಲಾನಯನ ಪ್ರದೇಶದ ವಿವಿಧ ಯೋಜನೆಗಳಿಗೆ ಕಳೆದ 3 ವರ್ಷದಲ್ಲಿ ಎಷ್ಟು ಹಣ ಬಜೆಟ್‌ನಲ್ಲಿ ಇಡಲಾಗಿತ್ತು, ಹಾಗೂ ಎಷ್ಟು ಹಣ ಖರ್ಚಾಗಿದೆ?*

ಆ) *ಈ ಎಲ್ಲಾ ಯೋಜನೆಗಳನ್ನು ಮುಗಿಸಲು ಬೇಕಾಗಿರುವ ಒಟ್ಟು ಹಣ ಎಷ್ಟು? ಹಾಗೂ ಈ ಎಲ್ಲಾ ಯೋಜನೆಗಳನ್ನು ಯಾವಾಗ ಮುಗಿಸಲಾಗುವುದು?*

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ (ಭಾರಿ ಮತ್ತು ಮಧ್ಯಮ ನೀರಾವರಿ ಮಂತ್ರಿಗಳು):

ಅ)

ವರ್ಷ	ಅನುದಾನ	ಮಾಡಿದ ಖರ್ಚು
	ಕೋಟಿ ರೂ.ಗಳಲ್ಲಿ	
1988-89	92.37	69.78
1989-90	119.86	91.95
1990-91	124.44	102.68

ಆ) ಇದಕ್ಕೆ ಬೇಕಾದ ಹಣ ಸುಮಾರು 1475 ಕೋಟಿ ರೂ.ಗಳಾಗಿರುತ್ತದೆ. (ಈ ವರ್ಷದ ಅನುದಾನ ರೂ. 140.47 ಕೋಟಿಗಳ ಹೊರತಾಗಿ) ಆದಷ್ಟು ಶೀಘ್ರವಾಗಿ ಮುಗಿಸಲು ಕ್ರಮ ಕೈಗೊಳ್ಳಲಾಗುವುದು.

ಅಧ್ಯಕ್ಷರು : ಮಂಡಿಸಲಾಯಿತು.

ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು

1) ಕರ್ನಾಟಕ ರಾಜ್ಯದ ನರ್ಸಿಂಗ್ ಅಸೋಸಿಯೇಷನ್‌ನವರು ಸತ್ಯಾಗ್ರಹ ಮಾಡುತ್ತಿರುವ ಬಗ್ಗೆ ಹಾಗೂ ಏಡ್ಸ್ ರೋಗಕ್ಕೆ ತುತ್ತಾಗಿರುವ ಶ್ರೀಮತಿ ಸುಮಿತ್ರಾ ಅವರಿಗೆ ಸರ್ಕಾರದಿಂದ ಆರ್ಥಿಕ ಸಹಾಯ

+ಶ್ರೀ ಪಿ.ಜಿ.ಆರ್. ಸಿಂಧ್ಯ (ಕನಕಪುರ): ಸನ್ಮಾನ್ಯ ಅಧ್ಯಕ್ಷರೆ, ಈ ದಿವಸ ಒಂದು ವಿಚಾರವನ್ನು ಸದನದಲ್ಲಿ ಪ್ರಸ್ತಾಪ ಮಾಡುವುದಕ್ಕಾಗಿ ತಮ್ಮ ಅಪ್ಪಣೆ ಕೋರಿದ್ದೆ. ಮಾನ್ಯ ಆರೋಗ್ಯ ಸಚಿವರ ಗಮನವನ್ನು ವಿಶೇಷವಾಗಿ ಮತ್ತು ಸರ್ಕಾರದ ಗಮನಕ್ಕೂ ಸಹಾ ಈ ಸಮಸ್ಯೆಯನ್ನು ತರಬೇಕೆಂದು ನಾನು ಬಯಸುತ್ತೇನೆ. ಬಹಳ ಮುಖ್ಯವಾಗಿ ಕರ್ನಾಟಕ ರಾಜ್ಯದ ನರ್ಸಿಂಗ್ ಅಸೋಷಿಯೇಶನ್‌ಗೆ ಸೇರಿದ ಹಾಗೂ ನಮ್ಮ ಸರ್ಕಾರಿ ಕ್ಷೇತ್ರದಲ್ಲಿ ಕೆಲಸ ಮಾಡತಕ್ಕಂಥ ಎಲ್ಲಾ ನರ್ಸ್‌ಗಳು, ಈ ರಾಜ್ಯದ ಸರ್ಕಾರಿ ಆಸ್ಪತ್ರೆಗಳಲ್ಲಿ ನಿನ್ನೆಯಿಂದ ಸತ್ಯಾಗ್ರಹ ಮಾಡುತ್ತಿದ್ದಾರೆ. ಇದರಿಂದ ರೋಗಿಗಳಿಗೆ ತೊಂದರೆಯಾಗತಕ್ಕಂಥ ಸಂಭವವಿದೆ. ಹಲವಾರು ವರ್ಷಗಳಿಂದ ಅವರ ಕೆಲವು ಬೇಡಿಕೆಗಳಿವೆ. ಅವುಗಳಲ್ಲಿ ಒಂದೆರಡು ಬೇಡಿಕೆಗಳು ಸರ್ಕಾರ ಪರಿಶೀಲನೆ ಮಾಡಲು ಯೋಗ್ಯವಾಗಿರತಕ್ಕಂಥವು ಮತ್ತು ಅರ್ಹವಾಗಿರತಕ್ಕಂಥವು. ಅವರು ಸುಮಾರು 16-17 ವರ್ಷಗಳ ಹಿಂದೆ ತಮ್ಮ "ವಾಷಿಂಗ್ ಅಲೊಯೆನ್ಸ್" ಹೆಚ್ಚು ಮಾಡಬೇಕೆಂದು ಕೇಳಿದ್ದರು. ಹಿಂದಿನ ಸರ್ಕಾರಗಳು ಅದನ್ನು ಮಾಡುತ್ತೇವೆಂದು ಇದುವರೆಗೂ ಭರವಸೆ ಕೊಡುತ್ತಾ ಬರುತ್ತಿದೆ ನಾನು ಆಗ ಆರೋಗ್ಯ ಮಂತ್ರಿಯಾಗಿದ್ದಾಗ ಭಾಗಶ: ಅವರ ಸಮಸ್ಯೆಗಳನ್ನು ಬಗೆಹರಿಸಲಿಕ್ಕೆ ಪ್ರಯತ್ನ ಮಾಡಿದ್ದೆ. ಆದರೂ ಕೆಲವು ಆಗಿಲ್ಲ. ಆದುದರಿಂದ, ಇವೊತ್ತು ಅವರು ಬೀದಿಗಿಳಿದು ಸತ್ಯಾಗ್ರಹ ಮಾಡುತ್ತಿದ್ದಾರೆ. ಇದರ ಬಗ್ಗೆ ಸರ್ಕಾರ ತೀವ್ರವಾಗಿ ಗಮನಹರಿಸಿ, ಅವರ ಪ್ರತಿನಿಧಿಗಳ ಜೊತೆ ಕುಳಿತುಕೊಂಡು ಚರ್ಚೆ ಮಾಡುವುದು ಮೊದಲನೆಯದು. ಇನ್ನು ಎರಡನೆಯದು, ಒಂದು ವರ್ಷದ ಹಿಂದೆ ಈ ಸದನದಲ್ಲಿ ಶಾಸಕರಾಗಿರತಕ್ಕ ಸನ್ಮಾನ್ಯ ಜೋಶಿಯವರು ಒಂದು ವಿಷಯವನ್ನು ಪ್ರಸ್ತಾಪ ಮಾಡಿದರು. ಮೀರಜ್ ಸರ್ಕಾರಿ ಆಸ್ಪತ್ರೆಯಲ್ಲಿ ಅವರ ಕ್ಷೇತ್ರದ ಒಬ್ಬ....